**<u>ಹಿರಿಯ ಸಿವಿಲ್?ನ್ಯಾಯಾಧೀಶರು ಮತ್ತು ಜೆ.ಎಂ.ಎಫ್?ಸಿ., ಚಳ್ಳಕೆರೆ.</u>**

**<u>ಸಿ.ಸಿ ನಂ.614/2020.</u>**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಶಿವಪ್ರಕಾಶ್ | ಪಿ.ಡಬ್ಲ್ಯೂ: 08 |
| ತಂದೆಯ ಹೆಸರು | : | ಭೀಮಪ್ಪ | ಸಿ.ಡಬ್ಲ್ಯೂ: 06 |
| ವಯಸ್ಸು | : | ಸು. 46 ವರ್ಷ | |
| ಉದ್ಯೋಗ | : | ಚಿನ್ನಭರಣದ ಮೌಲ್ಯಮಾಪಕ | |
| ವಾಸ | : | ಚಿತ್ರದುರ್ಗ | |

ದಿನಾಂಕ 29.03.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>**

ಸಾಕ್ಷಿಗೆ ಅಮಾನತುಪಂಚನಾಮೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿಃ 8 ಅಂತ ಗುರುತಿಸಲಾಗಿದೆ. ಸದರಿ ಸಹಿಯನ್ನು ನಾನು 2017 ನೇ ಇಸವಿಯಲ್ಲಿ ಕಳ್ಳತನದ ಪ್ರಕರಣದಲ್ಲಿ ಪಂಚನಾಮೆ ಕ್ರಮ ಜರುಗಿಸುವ ಸಮಯದಲ್ಲಿ ಬಂಗಾರದ ಆಭರಣಗಳನ್ನು ಪರೀಕ್ಷಿಸುವ ಸಂದರ್ಭದಲ್ಲಿ ಮಾಡಿರುತ್ತೇನೆ. ಚಿತ್ರದುರ್ಗದ ಚೇಳುಗುಡ್ಡದ ಹತ್ತಿರ ಇರುವ ಮನೆ, ಕಳ್ಳತನ ಮಾಡಿರುವ ವ್ಯಕ್ತಿಯ ಮನೆಯಾಗಿದ್ದು ಸದರಿ ಮನೆಯ ಹತ್ತಿರ ಸಹಿ ಮಾಡಿರುತ್ತೇನೆ.

ನನ್ನನ್ನು ಪೋಲೀಸ್ ಇಲಾಖೆಯವರು ಬಂಗಾರದ ಆಭರಣದ ಪರೀಕ್ಷೆಗೋಸ್ಕರ ಕರೆದುಕೊಂಡು ಹೋಗಿರುತ್ತಾರೆ. ಸದರಿ ಸ್ಥಳಕ್ಕೆ ನಾವು ಇಲಾಖಾ ವಾಹನದಲ್ಲಿ ಹೋಗಿದ್ದು, ಸದರಿ ಮನೆಯಲ್ಲಿ ಆರೋಪಿಯು ಪೊಲೀಸರಿಗೆ ಅವರ ಮನೆಯಲ್ಲಿನ ಕಳ್ಳತನದ ಮಾಲನ್ನು ಕೊಟ್ಟಿದ್ದು, ಅವುಗಳನ್ನು ನಾನು ಪರಿಶೀಲನೆ ಮಾಡಿರುತ್ತೇನೆ. ಸದರಿ ಬಂಗಾರದ ಆಭರಣಗಳನ್ನು ಎಲ್ಲಿ ಎಲ್ಲಿ ಕಳ್ಳತನ ಮಾಡಿದ್ದರು ಎಂದು ನಾನು ತಿಳಿದುಕೊಂಡಿರುವುದಿಲ್ಲ.

ನಾನು ಆ ದಿನ ಒಂದು ಲಾಂಗ್ ನೆಕ್ಲೇಸ್, ನೆಕ್ಲೇಸ್, ಕರಿಮಣಿ ಸರ, ಕಿವಿ ಓಲೆಗಳು, ಬಳೆಗಳನ್ನು ಪರೀಕ್ಷೆ ಮಾಡಿ ತೂಕ ಮಾಡಿ ಕೊಟ್ಟಿರುತ್ತೇನೆ. ಒಟ್ಟು ಎಷ್ಟು ಪ್ರಕರಣಕ್ಕೆ ಸಂಬಂಧಿಸಿದ ಆಭರಣಗಳು ಇದ್ದವು ಅಂತ ನನಗೆ ಗೊತ್ತಿಲ್ಲ. ಸದರಿ ಪಂಚನಾಮೆಯನ್ನು ಸಂಜೆ 4.00 ಯಿಂದ 5.00 ಗಂಟೆವರೆಗೆ ಜರುಗಿಸಿರುತ್ತಾರೆ.

ಸಾಕ್ಷಿಗೆ ನಿಪಿಃ 6 ಆಭರಣಗಳಿರುವ ಭಾವಚಿತ್ರವನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿನ ಆಭರಣಗಳನ್ನು ನೋಡಿ ಗುರುತಿಸಿಕೊಂಡಿರುತ್ತಾರೆ. ಸದರಿ ಆಭರಣಗಳನ್ನು ಯಾರು ಯಾರು ಸೇರಿ ಕಳ್ಳತನ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಆದಿನ ಬಂಗಾರದ ಆಭರಣಗಳನ್ನು ಹಾಜರುಪಡಿಸಿದ ಆರೋಪಿಯನ್ನು ನೋಡಿದರೆ ನನಗೆ ಗುರುತಿಸಲು ಆಗುವುದಿಲ್ಲ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿಕೊಂಡಿರುವುದಿಲ್ಲ.

**(ಈ ಸಾಕ್ಷಿಯು ಪ್ರತಿಕೂಲ ಸಾಕ್ಷಿ ನುಡಿಯುತ್ತಿದ್ದಾನೆ. ಸಹಾಯಕ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿರುತ್ತಾರೆ. ಅನುಮತಿಸಿದೆ)**

**ಪಾಟೀ ಸವಾಲು ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ದಿಃ 16.10.2017 ರಂದು ನನಗೆ ನಿಪಿಃ 8 ರ ಪಂಚನಾಮೆಗೆ ಪೊಲೀಸರು ಕರೆಸಿದ್ದರು ಎಂದರೆ ಸರಿ. ನನ್ನ ಜೊತೆಗೆ ಚಾಸಾ.4 ಮತ್ತು 5 ರವರು ಬಂದಿದ್ದರು ಎಂದರೆ ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿಯೇ ಆ ದಿನ ಬಂಗಾರದ ಆಭರಣ ಕಳುವು ಮಾಡಿರುತ್ತೇನೆ ಅಂತ ತಿಳಿಸಿದ್ದು ಆತ ನನ್ನೊಂದಿಗೆ ಬಂದರೆ ಸದರಿ ಆಭರಣವನ್ನು ತೋರಿಸುತ್ತೇನೆ ಅಂತ ತಿಳಿಸಿದ ಎಂದರೆ ಸರಿಯಲ್ಲ.

ನಾವು ಆತನ ಜೊತೆ ಮದೀನಾ ಮಸೀದಿ ಮುಂಭಾಗ, ಚೇಳುಗುಡ್ಡ, ಚಿತ್ರದುರ್ಗದಲ್ಲಿರುವ ಮನೆಯ ಹತ್ತಿರ ಹೋಗಿರುತ್ತೇವೆ ಎಂದರೆ ಸರಿ. ಆಗ 1 ನೇ ಆರೋಪಿಯು ಗಾಡ್ರೇಜ್ ಬೀರುವಿನಲ್ಲಿರುವ ಕಳುವು ಮಾಡಿದ ಆಭರಣಗಳನ್ನು ತೆಗೆದು ಪೊಲೀಸರಿಗೆ ಕೊಟ್ಟಿರುತ್ತಾನೆ ಎಂದರೆ ಸರಿ. ಸದರಿ ಆಭರಣಗಳನ್ನು ನಾನು ಚಿತ್ರದುರ್ಗ ನಗರದ ಶ್ರೀರಾಮ ಕಲ್ಯಾಣ ಮಂಟಪದಲ್ಲಿ ಕಳುವು ಮಾಡಿದ ಬಂಗಾರದ ಆಭರಣ , ನಾನು ಮತ್ತು ನನ್ನ ಸ್ನೇಹಿತರಾದ ಜಗದೀಶ ಮತ್ತು ಮನ್ಸೂರ್ ರವರೊಂದಿಗೆ ಸೇರಿಕೊಂಡು ಚಿತ್ರದುರ್ಗ ನಗರದ ಪಂಚಾಚಾರ್ಯ ಕಲ್ಯಾಣ ಮಂಟಪ ಮತ್ತು ಚಳ್ಳಕೆರೆ ಪಟ್ಟಣದಲ್ಲಿ ಕಳ್ಳತನ ಮಾಡಿದ ಆಭರಣಗಳು ಎಂದು ತಿಳಿಸಿ ಪೊಲೀಸರಿಗೆ ಕೊಟ್ಟರು ಎಂದರೆ ಸರಿ.

ಪಿ.ಎಫ್.ನಂ. 24/2017 ರಲ್ಲಿನ ಐಟಂ ನಂ.1 ರಿಂದ 15 ರವರೆಗಿನ ಚಿನ್ನಾಭರಣಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಪರೀಕ್ಷಿಸಿ ತೂಕ ಮಾಡಿರುತ್ತೇನೆ ಎಂದರೆ ಸರಿ. ಆ ಸಮಯದಲ್ಲಿ ಅಮಾನತುಪಂಚನಾಮೆ ಮಾಡಿದ್ದರು ಎಂದರೆ ಸರಿ. ಸದರಿ ಪಂಚನಾಮೆಯನ್ನು ಬೆಳಗ್ಗೆ 8.00 ರಿಂದ 10.00 ಗಂಟೆ ವರೆಗೆ ಜರುಗಿಸಿದ್ದರು ಎಂದರೆ ನನಗೆ ಸಮಯ ಸರಿಯಾಗಿ ನೆನಪಿಲ್ಲ ನನಗೆ ತಿಳಿದ ಮಟ್ಟಿಗೆ ಆ ದಿನ ಸಂಜೆ 4.00 ಗಂಟೆ ಸಮಯದಲ್ಲಿ ಮಾಡಿರಬಹುದು ಅಂತ ಸಾಕ್ಷಿ ನುಡಿಯುತ್ತಾರೆ.

ಘಟನೆ ನಡೆದು 5 ವರ್ಷಗಳಾಗಿರುವುದರಿಂದ ಸಹಜ ಮರೆವಿನ ಕಾರಣ ಈ ಮೇಲೆ ಹೇಳಿದ ಅಂಶಗಳನ್ನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಲು ಆಗಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಯೇ ಬಂಗಾರದ ಆಭರಣಗಳನ್ನು ನನ್ನ ಮುಂದೆ ಹಾಜರುಪಡಿಸಿದ್ದರೂ ಕೂಡ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಆರೋಪಿ ನನಗೆ ನೆನಪಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು ಃ ಆರೋಪಿತರ ಪರ ಶ್ರೀ ಎನ್.ಟಿ.ಎಸ್. ವಕೀಲರಿಂದಃ</u>**

ನನಗೆ ಪೊಲೀಸರು ನೋಟೀಸ್ ಕೊಟ್ಟಿರುತ್ತಾರೆ. ಅಮಾನತುಪಂಚನಾಮೆಗೆ ಬನ್ನಿ ಅಂತ ನೋಟೀಸ್ ಕೊಟ್ಟಿರುವುದಿಲ್ಲ. ಅಮಾನತುಪಂಚನಾಮೆ ಕಾಲಕ್ಕೆ ನಾವು ಯಾರು ಯಾರು ಹೋಗಿದ್ದೆವು ಅಂತ ಅವರ ಹೆಸರು ನೆನಪಿಲ್ಲ. ಅದೇ ರೀತಿ ನನ್ನ ಜೊತೆ ಅಮಾನತುಪಂಚನಾಮೆ ಸಮಯದಲ್ಲಿ ಯಾರು ಯಾರು ಬಂದಿದ್ದರು ಅಂತ ಗೊತ್ತಿಲ್ಲ ಎಂದರೆ ಸರಿ. ಅದೇ ರೀತಿ ಆ ದಿನ ಅಮಾನತುಪಂಚನಾಮೆಗೆ ಯಾರು ಯಾರು ಸಹಿ ಮಾಡಿರುತ್ತಾರೆ ಅಂತ ಗೊತ್ತಿಲ್ಲ ಎಂದರೆ ಸರಿ.

ಅದೇ ರೀತಿ ಕಳುವಾದ ಆಭರಣಗಳು ಯಾರಿಗೆ ಸಂಬಂಧಪಟ್ಟಿರುತ್ತವೆ ಅಂತ ನನಗೆ ಗೊತ್ತಿಲ್ಲ ಎಂದರೆ ಸರಿ. ಅದೇ ರೀತಿ ಅಮಾನತುಪಂಚನಾಮೆಯಲ್ಲಿ ಏನು ಬರೆದಿದೆ ಅಂತ ನನಗೆ ಗೊತ್ತಿಲ್ಲ ಎಂದರೆ ಸರಿ. ಆ ದಿನ 1 ಮತ್ತು 3 ನೇ ಆರೋಪಿತರು ಯಾರು ಸಹ ಹಾಜರಿರಲಿಲ್ಲ ಎಂದರೆ ಸಾಕ್ಷಿಯು ಆರೋಪಿತರು ಇದ್ದರು ಆದರೆ ಯಾರು ಅಂತ ಗೊತ್ತಿಲ್ಲ. ಈ ದಿನ ನ್ಯಾಯಾಲಯದ ಮುಂದಿರುವ 1 ನೇ ಆರೋಪಿಯನ್ನು ಇದೇ ದಿನ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿ.

ಬೆಳ್ಳಿ ಬಂಗಾರ ಪರೀಕ್ಷೆಯನ್ನು ಮನೆಯಲ್ಲಿಯೇ ತೂಕ ಮಾಡಿರುತ್ತೇನೆ. ಘಟನಾ ಸ್ಥಳದ ಚಕ್ಕುಬಂಧಿ ಹೇಳಲು ಆಗುವುದಿಲ್ಲ ಎಂದರೆ ಸರಿ. ಅದೇ ರೀತಿ ಅಮಾನತುಪಂಚನಾಮೆಯನ್ನು ಎಷ್ಟು ಗಂಟೆಯಿಂದ ಎಷ್ಟು ಗಂಟೆವರೆಗೆ ಮಾಡಿರುತ್ತಾರೆ ಅಂತ ನಿಖರವಾಗಿ ಹೇಳಲು ಆಗುವುದಿಲ್ಲ ಎಂದರೆ ಸರಿ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್?ಸಿ., ಚಳ್ಳಕೆರೆ.